ಭ್ರಷ್ಟಾಚಾರಿಗಳ ಮೇಲೆ ಕಾನೂನು ಕ್ರಮ

2328 (2616); ಶ್ರೀ ನಾರಾಯಣಸ್ವಾಮಿ ಎಸ್.ಎನ್. (ಬಂಗಾರಪೇಟೆ)

ಅ) ಸರ್ಕಾರಿ ಕಛೇರಿಗಳಲ್ಲಿ ಭ್ರಷ್ಟಾಚಾರರಹಿತ ಆಡಳಿತ ನಡೆಯಬೇಕೆಂದು ಸರ್ಕಾರಕ್ಕೆ ಇಚ್ಛೆಯಿದೆಯೇ;

ಆ) ಹಾಗಿದ್ದಲ್ಲಿ, ಲೋಕಾಯುಕ್ತ ದಾಳಿ ನಡೆಸಿದ ಭ್ರಷ್ಟ ಅಧಿಕಾರಿಗಳ ಮೇಲೆ ಕಾನೂನು ಕ್ರಮಕೈಗೊಳ್ಳಲು ಸರ್ಕಾರದಿಂದ ಅನುಮತಿ ನೀಡಲು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಈ ವಿಳಂಬ ಧೋರಣೆಯಿಂದ ಭ್ರಷ್ಟ ಅಧಿಕಾರಿಗಳಿಗೆ ರಕ್ಷಣೆ ದೊರೆಯುವುದರಿಂದ ಪರೋಕ್ಷ ಬೆಂಬಲ ನೀಡಿದಂತಾಗುವುದಿಲ್ಲವೇ;

ಈ) ಹಾಗಿದ್ದಲ್ಲಿ, ಭ್ರಷ್ಟ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲು ಸರ್ಕಾರ ಅನುಮತಿ ನಿರಾಕರಿಸಿರುವ ಪ್ರಕರಣಗಳೆಷ್ಟು ಮತ್ತು ಅದಕ್ಕೆ ಕಾರಣ ಏನು?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು)

ಅ) ಹೌದು.

ಆ) **ಮತ್ತು** ಇ) ಸಂಖ್ಯೆ: ಸಿಆಸುಇ 43 ಸೇಇವಿ 2011, ದಿನಾಂಕ: 26.09.2011ರ ಸುತ್ತೋಲೆಯನ್ವಯ ಸರ್ಕಾರಿ ನೌಕರರ ವಿರುದ್ಧ ನ್ಯಾಯಾಲಯದಲ್ಲಿ ಕಾನೂನು ಕ್ರಮ ಜರುಗಿಸಲು ಅಭಿಯೋಜನಾ ಮಂಜೂರಾತಿ ಆದೇಶವನ್ನು 3 ತಿಂಗಳ ಕಾಲಮಿತಿಯಲ್ಲಿ ನೀಡಲು ಕಟ್ಟುನಿಟ್ಟಾಗಿ ಕ್ರಮಕೈಗೊಳ್ಳಬೇಕೆಂದು ಭ್ರಷ್ಟಾಚಾರ ತಡೆ ಅಧಿನಿಯಮ 1988 ರ ಪ್ರಕರಣ 19 ಮತ್ತು ದಂಡ ಪ್ರಕ್ರಿಯಾ ಸಂಹಿತೆಯ ಪ್ರಕರಣ 197 ರಡಿಯಲ್ಲಿ ಕ್ರಮ ಜರುಗಿಸಲು ಅಧಿಕಾರ ಹೊಂದಿರುವ ಪ್ರಾಧಿಕಾರಗಳಿಗೆ ಸೂಚಿಸಲಾಗಿರುತ್ತದೆ. ಅದರಂತೆ ಲೋಕಾಯುಕ್ತದಿಂದ ಅಭಿಯೋಜನಾ ಮಂಜೂರಾತಿ ಕೋರಿ ಬಂದ ಪ್ರಕರಣಗಳನ್ನು ದಾಖಲೆಗಳ ಪರಿಶೀಲನೆಯೊಂದಿಗೆ ನಿಯಮಾನುಸಾರವಾಗಿ ಪರಿಶೀಲಿಸಿ ವಿಳಂಬಕ್ಕೆ ಆಸ್ಪದ ನೀಡದೆ ಆದ್ಯತೆಯ ಮೇರೆಗೆ ಶೀಘ್ರವಾಗಿ ಮಂಜೂರಾತಿ ನೀಡಲಾಗುತ್ತಿದೆ.

ಈ) ಎರಡು ಪ್ರಕರಣಗಳಲ್ಲಿ ಅಭಿಯೋಜನಾ ಮಂಜೂರಾತಿ ನೀಡಲು ನಿರಾಕರಿಸಲಾಗಿರುತ್ತದೆ.

ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

Government of Karnataka

Karnataka Lokayukta

RAID CASES

(Rejected Cases)

Sl. No.	Crime-No / Pol.Stn	AGO-Name & Address	Date of Prosecution sanction orders	Letter addressed to Competent Authorities	Reason for rejection by C.A
1.	52/2007 Bangalore City	G Guruprasad Chief Engineer. Minor Irrigation Department, Bijapur	Letter dtd 22/10/2009 was addressed to C.A. to issue P.S O Rejected dtd. 12/02/2014	Principal Secretary to Govt , PWD.. Dept.Vikasa soudha. Bangalore	Competent authority has opined that the properties and Bank accounts which belong to the brothers of the AGO are wrongly considered as Benami properties of AGO during investigation
2	14/2012 Hassan	C A.Keerthikumar Secretary VSSN. Hassan	Letter dtd 09/12/2014 was addressed to C.A to issue P.S.O. Rejected dtd. 06/02/2015	President primary Agricultural Co-OP Bank. Hassan	Competent authority has stated that the AGO is not a government employee and hence doesn't come within purview of P.C Act